# ಬೂರುಗ ಬಂಗಾರ!







ಹಾವೇರಿ ಜಿಲ್ಲೆ ಹಿರೇಕೆರೂರಿನ ಕರಡಿ ಕೊಳ್ಳ ಅರಣ್ಯದಲ್ಲಿರುವ ಶಿದ್ದೇಶ್ವರ ದೇವಾಲಯದ ಸುತ್ತಲೂ ಬೆಟ್ಟಗಳ ಸಾಲು. ಕಾಡಿನಲ್ಲಿ ಅಡ್ಡಾಡುವಾಗ ಮುಷ್ಟಿ ಗಾತ್ರದ ಕಾಯಿಗಳು ಜೋತು ಬಿದ್ದ ಹತ್ತಾರು ಮರಗಳು ಕಂಡವು. ಕೆಲವು ಮರಗಳಲ್ಲಿ ಬೊಗಸೆಯಗಲದ ಹೂವುಗಳು. ಥಟ್ಟನೆ ಸೆಳೆಯುವ ಬಂಗಾರದ ಬಣ್ಣದ ಆ ಹೂಗಳ ನೋಟವಂತೂ ಕಣ್ಣಿಗೆ ಹಬ್ಬ.

ಹದಿನೈದು ದಿವಸ ಮುಂಚೆ ಇಡೀ ಬೆಟ್ಟವೇ ಹಳದಿ ಹೂಗಳಿಂದ ತುಂಬಿತ್ತು ಎಂದರು ಅರಣ್ಯ ರಕ್ಷಕ ಅಶೋಕ್. ಜೊತೆಗೆ ಆ ಮರದ ಹೆಸರು 'ಬೆಟ್ಟ ತಾವರೆ' ಎಂದು ಹೇಳಲು ಮರೆಯಲಿಲ್ಲ. ಹೂವುಗಳು ಅರಳಿದಾಗ ತಾವರೆಯಂತೆ ಕಾಣುವುದರಿಂದ ರಾಜ್ಯದ ಕೆಲವು ಕಡೆ ಆ ಹೆಸರಿನಿಂದ ಕರೆಯುತ್ತಾರೆ. ಮರದ ಸಾಮಾನ್ಯ ಹೆಸರು ಅರಿಶಿನ ಬೂರುಗ. ಪ್ರಾದೇಶಿಕವಾಗಿ ಕಲ್ಲು ಬೂರುಗ ಎಂಬ ಹೆಸರೂ ಉಂಟು. ಕಲ್ಲು ಬಂಡೆಗಳಿರುವಲ್ಲಿಯೇ ಹೆಚ್ಚಾಗಿ ಈ ಮರ ಬೆಳೆಯುವುದರಿಂದ ಹೀಗೆ ಗುರುತಿಸುತ್ತಾರೆ.

ಇಂಗ್ಲಿಷಿನಲ್ಲಿ ಬಟರ್ ಕಪ್ಸ್ – ಅಂದರೆ ಬೆಣ್ಣೆಚಿಪ್ಪಿನ ಮರ ಎಂಬ ಆಕರ್ಷಕ ಹೆಸರಿದೆ. ಅರಳಿದ ಹಳದಿ ಹೂಗಳು ಪ್ರಕಾಶಮಾನವಾಗಿ, ಬೆಣ್ಣೆಯಂತೆ ಕಾಣುವುದರಿಂದ ಈ ಉಪಮೇಯ. ಸಿಲ್ಕ್ ಕಾಟನ್ ಟ್ರೀ ಹಾಗೂ ಗೋಲ್ಡನ್ ಸಿಲ್ಕ್ ಕಾಟನ್ ಟ್ರೀ ಎಂದೂ ಕರೆಯಲಾಗುತ್ತದೆ. ಕನ್ನಡವೂ ಸೇರಿದಂತೆ, ವಿವಿಧ ಭಾಷೆಯಲ್ಲಿ ಇದಕ್ಕಿರುವ ಹೆಸರುಗಳು ಇದರ ಹೂವಿನ ಬಣ್ಣದಿಂದಲೇ ಬಂದಿರುವುದನ್ನು ಗಮನಿಸಬಹುದು.

ಕರಡಿ ಕೊಳ್ಳ ಕಾಡಿನಲ್ಲಿ ಸಾಕಷ್ಟು ಅರಿಶಿನ ಬೂರುಗ ಮರಗಳಿವೆ ಎಂದರು ಕಾಡಂಚಿನ ಗುಡ್ಡದ ಮಾದಾಪುರ ಗ್ರಾಮವಾಸಿ ಕರಿಮಲ್ಲಪ್ಪ. ಶಿವರಾತ್ರಿ ಹಬ್ಬದ ದಿನ ಪೂಜೆಗೆ ಈ ಹೂ ಶ್ರೇಷ್ಠವೆಂದು ಹಳ್ಳಿಗರು ಬಿಡಿಸಿಕೊಂಡು ಹೋಗುತ್ತಾರಂತೆ. ಶಿವನಿಗಷ್ಟೇ ಅಲ್ಲ, ಬುದ್ಧನಿಗೂ ಈ ಹೂವು ಬಹು ಪ್ರಿಯ. ಬೌದ್ಧ ಧರ್ಮದಲ್ಲಿ ಇದನ್ನು ಸಾಧನೆಯ ಬೆಳಕು ತೋರುವ ಮರ ಎಂದೇ ಪರಿಗಣಿಸಲಾಗುತ್ತದೆ.

ಎಲೆಯುದುರುವ ಶುಷ್ಕ ಅರಣ್ಯಗಳಲ್ಲಿ ಈ ಮರ ಬೆಳೆಯುತ್ತದೆ. ಇದರ ಮೂಲ ಭಾರತ, ಮಲೇಶಿಯಾ, ಥಾಯ್ಲೆಂಡ್ ಹಾಗೂ ಬರ್ಮಾ. 20ರಿಂದ 25 ಅಡಿ ಎತ್ತರ ಬೆಳೆಯುವ ಸಾಧಾರಣ ಗಾತ್ರದ ಮರ. ಹೂವೇ ಇಡೀ ಮರದ ಆಕರ್ಷಕ ಭಾಗ. ಪ್ರತಿ ಹೂ 10 ಸೆಂ.ಮೀ.ನಷ್ಟು ಅಗಲವಿರುತ್ತವೆ. ಫೆಬ್ರುವರಿಯಿಂದ ಏಪ್ರಿಲ್‌ವರೆಗೆ ಹೂಕಾಯುವ ಕಾಲ. ಹಾಗೆ ಹೂಕಾಯುವಾಗ ಮರದ ಎಲೆಗಳೆಲ್ಲಾ ಬಿದ್ದು ಹೋಗಿರುತ್ತವೆ. ಹಾಗಾಗಿ ಇಡೀ ಮರವೇ ಹಳದಿ ಬಣ್ಣದ ಕೌದಿ ಹೊದ್ದಂತೆ ಕಾಣುತ್ತದೆ.

ಕಾಯಿಗಳು ಎಳೆಯದಾಗಿದ್ದಾಗ ಕಂದು ಬಣ್ಣಕ್ಕಿದ್ದು ಬಲಿತ ಹಾಗೆಲ್ಲಾ ಮಾಸಲು ಬಣ್ಣಕ್ಕೆ ತಿರುಗುತ್ತವೆ. ಕಾಯಿಗಳ ಒಳಭಾಗ ಬಹುತೇಕ ಟೊಳ್ಳಾಗಿರುವುದರಿಂದ ಹಗುರವಾಗಿರುತ್ತವೆ. ಗಿಡದಲ್ಲಿಯೇ ಪೂರ್ತಿ ಒಣಗಿದ ಕಾಯಿಗಳು ಬಿರಿದುಕೊಳ್ಳುತ್ತವೆ. ಆಗ ಕಾಯಿಯ ಒಳಗಿನ ಹತ್ತಿಯ ಚೂರುಗಳು ಬೀಜ ಸಮೇತ ಗಾಳಿಯಲ್ಲಿ ಹಾರಾಡುತ್ತಿರುತ್ತವೆ, ಆ ಪ್ರಕ್ರಿಯೆಯಲ್ಲಿ ಎಲ್ಲೋ ಒಂದು ಕಡೆ ನೆಲಕ್ಕೆ ಬಿದ್ದು ಬೀಜ ಪ್ರಸಾರವಾಗಿ ಸಸಿಗಳೂ ಹುಟ್ಟಿಕೊಳ್ಳುತ್ತವೆ. ಕಾಂಡದ ತುಂಡಿನಿಂದಲೂ ಸಸ್ಯಾಭಿವೃದ್ಧಿ ಸಾಧ್ಯ ಎನ್ನುತ್ತಾರೆ ಅಶೋಕ್.

ಕಾಯಿಯೊಳಗಿನ ಹತ್ತಿಯನ್ನು ಸಂಗ್ರಹಿಸಿ ತಲೆದಿಂಬು ಮಾಡುವ ಅಭ್ಯಾಸ ಕೆಲವೆಡೆ ಇದೆ. ಈ ದಿಂಬುಗಳು ಅತ್ಯಂತ ಮೃದುವಾಗಿದ್ದು ಒಳ್ಳೆಯ ನಿದ್ದೆ ತರುತ್ತವೆ. ಆದರೆ ಇತ್ತೀಚೆಗೆ ಈ ರೀತಿ ದಿಂಬು ತಯಾರಿಸುವುದು ಕಡಿಮೆಯಾಗಿದೆ. ಮನೆ ಮುಂದೆ ನೆಡಲು, ಸಾಲು ಮರಗಳಾಗಿ ಬೆಳೆಸಲು ಈ ಮರ ಉತ್ತಮ ಆಯ್ಕೆ.

■ ಮಲ್ಲಿಕಾರ್ಜುನ ಹೊಸಪಾಳ್ಯ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65